**ಹೆಂಡತಿ:** (ಬೆಳದಿಂಗಳ ಬೆಳಕಿನಲ್ಲಿ) ಈ ಹಿಂದೆ ನಿಮ್ಮ ತಟ್ಟೆಯಿಂದ ನನಗೆ ಸದಾ ತಿನ್ನಿಸುತ್ತಿದ್ರಿ. ಆದ್ರೆ ಈಗೀಗ ಅದನ್ನೆಲ್ಲ ಬಿಟ್ಟಿದ್ದೀರಿ ಯಾಕೆ?
**ಗಂಡ:** ಇತ್ತೀಚೆಗೆ ನೀನು ತುಂಬಾ ಚೆನ್ನಾಗಿ, ರುಚಿರುಚಿಯಾಗಿ ಅಡುಗೆ ಮಾಡುತ್ತಿದ್ದೀಯ ಅದಕ್ಕೆ.

**ಗೆಳೆಯ:** ಪ್ರೀತಿಸಿದ ಹುಡುಗಿ ನನಗೆ ಕೈಕೊಟ್ಟು, ಸಂಜಯ್ ಎಂಬಾತನ ಜೊತೆ ಓಡಿಹೋಗಿದ್ದಾಳೆ. ಈಗ ನಾನೇನು ಮಾಡಲಿ?
**ಗುಂಡ:** ಏನೂ ಮಾಡಬೇಡ. ಹೆಂಡತಿ ಜೊತೆ ಆರಾಮವಾಗಿರು.



ನಿಮಗೆ "ನ್ಯೂ ಇಯರ್" ಫುಲ್ ಪ್ಯಾಕೇಜ್ ತೊಗೋಳ್ಳಿ ಡಿಯರ್....!!

**ಗೆಳೆಯ:** ಹೆಂಡತಿಯೊಡನೆ ವಾಕಿಂಗ್ ಹೋಗುವುದಕ್ಕೆ ಏನನ್ನುತ್ತಾರೆ?
**ಗುಂಡ:** ಅದನ್ನು ಸತಿಯೊಡನೆ 'ಸಹ' ಗಮನವೆನ್ನುತ್ತಾರೆ.

**ಗಂಡ:** ನಿನ್ನಿಂದ ಆ ನಾಯಿಮರಿಯನ್ನು ದಾರಿಗೆ ತರುವುದು ಸಾಧ್ಯವಿಲ್ಲ.
**ಹೆಂಡತಿ:** ನೀವು ಸುಮ್ಮನಿರಿ. ನೀವೂ ಈ ನಾಯಿ ಥರಾನೇ ಆಡುತ್ತಿದ್ರಿ, ನಿಮ್ಮನ್ನೆ ದಾರಿಗೆ ತಂದಿದ್ದೇನೆ ಎಂದರೆ, ಇನ್ನು ಆ ನಾಯಿ ಮರಿ ಯಾವ ಲೆಕ್ಕ ನನಗೆ...


**ಗೆಳೆಯ:** ಭೂತ, ವರ್ತಮಾನ ಹಾಗೂ ಭವಿಷ್ಯತ್ ಕಾಲಗಳ ಬಗ್ಗೆ ಒಂದೇ ಒಂದು ವಾಕ್ಯದಲ್ಲಿ ಹೇಳು?
**ಗಂಡ:** ಪ್ರೇಮ, ಮದುವೆ, ವಿಚ್ಛೇದನ.

**ಹೆಂಡತಿ:** ನನ್ನನ್ನು ಮದುವೆಯಾಗಲು ಎಷ್ಟೊಂದು ಗಂಡುಗಳು ಬಂದಿದ್ದವು ಗೊತ್ತಾ?
**ಗುಂಡ:** ಆ ಮೂರ್ಖರ ಪೈಕಿ ಅತ್ಯಂತ ಶತಮೂರ್ಖನನ್ನೇ ಮದುವೆಯಾಗಬೇಕಿತ್ತು. ನನ್ನನ್ನೇಕೆ ಮದುವೆಯಾದೆ?
**ಹೆಂಡತಿ:** ರೀ ನಿಮಗೆ ಹೇಗೆ ಗೊತ್ತಾಯಿತು? ನಾನು ಮಾಡಿದ್ದು ಅದನ್ನೇ.

**ಮಾಣಿ:** ಏನು ಕೊಡಲಿ ಸಾರ್?
**ಗಿರಾಕಿ:** ಒಂದು ಕಪ್ಪು ಬಿಸಿ ಹಾಲು.
**ಮಾಣಿ:** ಸಾರ್ ನಮ್ಮಲ್ಲಿ ಕಪ್ಪು ಹಾಲು ಇಲ್ಲ. ಬಿಳಿ ಹಾಲು ಇದೆ ಕೊಡ್ಲಾ?

**ರಾಮು:** ಅತ್ತೆ ನನಗೆ ಚಿಂಪಾಂಜಿಯನ್ನು ನೋಡಬೇಕೆಂದು ತುಂಬಾ ಆಸೆಯಾಗಿದೆ. ತೋರಿಸುತ್ತೀರಾ?
**ಅತ್ತೆ:** ಹೌದಾ? ಹಾಗಿದ್ರೆ, ಒಂದು ಸಲ ನಿಮ್ಮ ಮಾವನ ಮುಖ ನೋಡು ಸಾಕು.

KSRTC ಬಸ್ಸಿನ ದರ 15% ಹೆಚ್ಚಳ..!!




**ಟೀಚರ್:** (ಪಾಠ ಮುಗಿದ ನಂತರ) ಯಾರಿಗಾದರೂ ಗೊತ್ತಾಗದಿದ್ದರೆ ಪ್ರಶ್ನೆ ಕೇಳಬಹುದು.
**ಗುಂಡ:** ಗಂಟೆ ಹೊಡೆಯಲು ಇನ್ನೂ ಎಷ್ಟು ನಿಮಿಷ ಇದೆ ಮಿಸ್?

**ಉಪಾಧ್ಯಾಯರು:** ದಾಮೋದರ, ನಾನು ನಿಮ್ಮ ತಂದೆಗೆ 500 ರೂಪಾಯಿ ಸಾಲ ಕೊಟ್ಟಿದ್ದೆ. ಸ್ವಲ್ಪ ದಿನದ ಬಳಿಕ ಅವರು ಅದನ್ನು ನನಗೆ ಹಿಂತಿರುಗಿಸಿದರು. ಈಗ ಇನ್ನುಳಿದ ಬಾಕಿ ಎಷ್ಟು ಅಂತ ಹೇಳು?
**ದಾಮೋದರ:** 500 ರೂಪಾಯಿ.
**ಉಪಾಧ್ಯಾಯರು:** ನಿನಗೆ ಲೆಕ್ಕವೇ ಬರಲ್ಲ.
**ದಾಮೋದರ:** ಸುಮ್ಮನಿರಿ ಸಾರ್! ನಮ್ಮ ತಂದೆ ಇದುವರೆವಿಗೂ ಯಾರ ಸಾಲಾನು ವಾಪಸ್ ಕೊಟ್ಟಿಲ್ಲ. ಅವರು ಸಾಲ ವಾಪಾಸ್ ಕೊಟ್ಟಿರುತ್ತಿದ್ರೆ, ಮನೆ ಮುಂದೆ ದಿನವೂ ಸರದಿ ಏಕಿರುತ್ತಿತ್ತು?

**ತಾಯಿ:** ಯಾಕೋ ಮುಖ ಸಪ್ಪಗೆ ಮಾಡಿಕೊಂಡು ಕುಳಿತಿದ್ದೀಯಾ?
**ಮಗ:** ನನಗೆ ಕತ್ತೆಯ ಮೇಲೆ ಕುಳಿತುಕೊಂಡು ಸವಾರಿ ಮಾಡಬೇಕಂತ ಆಸೆ ಆಗ್ತಿದೆ.
**ತಾಯಿ:** ಅಷ್ಟೇ ತಾನೇ, ಪಕ್ಕದಲ್ಲೇ ಅಪ್ಪ ಇದಾರಲ್ಲ. ಅವರ ಮೇಲೆ ಕುಳಿತುಕೊಂಡು ಸವಾರಿ ಮಾಡು, ಅಷ್ಟೆ.

**ಟೀಚರ್:** ಭೂಮಿ ಯಾವ ಆಕಾರದಲ್ಲಿದೆ?
**ಗುಂಡ:** ಗುಂಡಗಿದೆ ಮಿಸ್!
**ಟೀಚರ್:** ಅದು ಹೇಗೆ ಹೇಳ್ತೀಯಾ? ಚಪ್ಪಟೆಯಾಗಿಯೂ ಇರಬಹುದಲ್ಲ?
**ಗುಂಡ:** ಇಲ್ಲ ಮಿಸ್! ನಮ್ ಅಪ್ಪ ಪಕ್ಕದ್ಮನೆ ಆಂಟಿಗೆ ನೀನು ಭೂಮಿ ಥರಾ ಗುಂಡಗಿದ್ದೀಯಾ ಅಂತ ಹೇಳ್ತಿರ್ತಾರೆ!

**ಗೆಳೆಯ:** ನಿನ್ನ ಹೆಂಡತಿಗೆ, ಬೇಕಾದಂತೆ ಇರೋಕೆ ಅನುಮತಿ ಕೊಟ್ಟಿದ್ದೀಯಾ?
**ಗುಂಡ:** ಇಲ್ಲಾ ಕಣೋ.
**ಗೆಳೆಯ:** ಮತ್ತೆ ಅವಳ್ಯಾಕೆ ಹೀಗೆಲ್ಲ ಮಾಡುತ್ತಿದ್ದಾಳೆ?
**ಗುಂಡ:** ಅವಳಿಗೆ, ನನ್ನ ಅನುಮತಿ ಬೇಕಿಲ್ಲ. ತಾನಾಗಿಯೇ ಕಿತ್ತುಕೊಂಡಿದ್ದಾಳೆ.

**ಗೆಳೆಯ:** ಏನೋ ಗುಂಡ ನಿನ್ನ ಹೆಂಡತಿಗೆ ಇದ್ದಕ್ಕಿದ್ದ ಹಾಗೆ ಶಕ್ತಿ ಬಂದು ನಿನ್ನನ್ನು ಹೊಡೆಯೋಕೆ ಮುಂದಾಗಿದ್ದಾಳೆ. ಅಷ್ಟಕ್ಕೂ ಅವಳಿಗೆ ಅಷ್ಟೊಂದು ಶಕ್ತಿ ಹೇಗೆ ಬಂತು?
**ಗುಂಡ:** ಅದೇ ಕಣೋ ಸರ್ಕಾರ ಶಕ್ತಿ ಯೋಜನೆ ಪ್ರಾರಂಭಿಸಿದೆ ಅಲ್ವಾ ಅವಾಗಿನಿಂದ ಶಕ್ತಿ ಬಂದಿದೆ.

ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು